**<u>ಮೆಃ ಪ್ರಧಾನ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ ನ್ಯಾಯಾಲಯ, ಮುಧೋಳ</u>**

C.C.No.809/2012
CW11/PW9

| | |
|---|---|
| ಹೆಸರು | ಕೃಷ್ಣಾ ಮುದಿಗೌಡರ |
| ತಂದೆಯ ಹೆಸರು | ಪಾಂಡಪ್ಪಗೌಡ |
| ವಯಸ್ಸು | 59 ವರ್ಷ |
| ಉದ್ಯೋಗ | ಶಿಕ್ಷಕರು |
| ವಾಸಸ್ಥಳ | ಮುದೋಳ, ತಾಃ ಮುದೋಳ |

**ದಿನಾಂಕಃ 18-12-2024 ರಂದು ಸಾಕ್ಷಿಯನ್ನು ಕರೆದು ಪ್ರಮಾಣ ವಚನ ಬೋದಿಸಲಾಯಿತು.**

**<u>ಮುಖ್ಯ ವಿಚಾರಣೆಃ- ಎ.ಪಿ.ಪಿ ರವರಿಂದ.</u>**

2012 ನೇ ಸಾಲೀನ 12 ನೇ ತಾರೀಕನಂದು ನಾನು ಪ್ರತಿನಿತ್ಯದಂತೆ ಶಾಲೆಯ ಕರ್ತವ್ಯಕ್ಕೆ ಹೋಗಿ ಮರಳಿ ಸಾಯಂಕಾಲ ನಮ್ಮ ಮನೆಗೆ ಬಂದಾಗ ನಮ್ಮ ಪಕ್ಕದ ಮನೆಯಲ್ಲಿರುವ ಚಾಸಾ-1 ರವರ ಮನೆಯಲ್ಲಿ ಕಳ್ಳತನ ಆಗಿರುತ್ತದೆ ಎಂದು ನನಗೆ ಮಾಹಿತಿ ಬಂದಿತು. ನಂತರ ಇದರ ಬಗ್ಗೆ ಜನರಲ್ಲಿ ವಿಚಾರಿಸಿದಾಗ ಚಾಸಾ-1 ರವರ ಮನೆಯಿಂದ ಸುಮಾರು 17.5 ತೊಲೆ ಬಂಗಾರದ ಆಭರಣಗಳು ಕಳುವು ಆಗಿರುತ್ತದೆ ಎಂದು ತಿಳಿದು ಬಂದಿತು. ನಂತರ ನನಗೆ ಪೋಲಿಸರು 2012 ನೇ ಸಾಲಿನ 13 ನೇ ತಾರೀಕಿನಂದು ಪೊಲೀಸ ಠಾಣೆಗೆ ಕರೆಯಿಸಿ ಘಟನೆಯ ಬಗ್ಗೆ ವಿಚಾರಣೆ ಮಾಡಿರುತ್ತಾರೆ.

***(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಲು ಸ.ಸ.ಅ ರವರು ವಿನಂತಿಸಿದ್ದರಿಂದ ಸದರಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು)***

**<u>ಪಾಟೀ ಸವಾಲು- ಎ.ಪಿ.ಪಿ ರವರಿಂದ.</u>**

ದಿನಾಂಕ 21.06.2012 ರಂದು ಚಾಸಾ-1 ರವರ ಮನೆಯಲ್ಲಿ ಕಳ್ಳತನ ಮಾಡಿದ ಆರೋಪಿತರು ಸಿಕ್ಕಿರುತ್ತಾರೆ ಅಂತಾ ಪೋಲಿಸರು ನನ್ನನ್ನು ಪೋಲಿಸ ಠಾಣೆಗೆ ಕರೆಯಿಸಿ ಪೋಲಿಸ ಠಾಣೆಯಲ್ಲಿ ಇದ್ದ 05 ಜನ ಆರೋಪಿತರನ್ನು ತೋರಿಸಿ ಇವರೆ ಚಾಸಾ-1 ರವರ ಮನೆಯಲ್ಲಿರುವ ಬಂಗಾರದ ಆಭರಣಗಳನ್ನು ಕಳ್ಳತನ ಮಾಡಿರುತ್ತಾರೆ ಎಂದು ಹೇಳಿದರು ಎಂದರೆ ಸರಿಯಲ್ಲ. ಈ ಕುರಿತು ನಾನು ದಿನಾಂಕ 21.06.2012 ರಂದು ಈಗ ನನಗೆ ಓದಿ ಹೇಳಿದ ಹಾಗೇ ಮರು ಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯ ಸದರಿ ಮರು ಹೇಳಿಕೆಯನ್ನು ಈಗ ನಿಪಿ-22 ಎಂದು ಗುರುತಿಸಲಾಯಿತು. ನಿಪಿ-22 ರಲ್ಲಿ ಬರೆದಿರುವ ಸಂಗತಿಗಳ ಬಗ್ಗೆ ನನಗೆ ಮಾಹಿತಿ ಇದ್ದರೂ ಸಹಿತ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲುಃ  ಆರೋಪಿ ನಂ.1 ಮತ್ತು 4 ರವರ ಪರ ಶ್ರೀ ಎಸ್.ಐ.ಜೆ ವಕೀಲರಿಂದಃ</u>**

ಈ ಪ್ರಕರಣದ ನನಗೆ ಯಾವುದೇ ವೈಯಕ್ತಿಕ ಮಾಹಿತಿ ಇರುವುದಿಲ್ಲ ಎಂದರೆ ಸರಿ.

**<u>ಪಾಟೀ ಸವಾಲುಃ</u>** ಆರೋಪಿ ನಂ.3 ಮತ್ತು 5 ರವರ ಪರ ಶ್ರೀ ಟಿ.ಆರ್.ಐ ಮತ್ತು ಎಚ್.ಕೆ.ಬಿ ವಕೀಲರು ಈ ಮೇಲಿನ ಪಾಟೀ ಸವಾಲನ್ನು ಅಳವಡಿಸಿಕೊಳ್ಳುತ್ತಾರೆ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು )

ಓ ಹೇ ಕೇ ಸರಿ ಇದೆ.

Sd/-
ಪ್ರಧಾನ ದಿವಾಣಿ ನ್ಯಾಯಾಧೀಶರು
ಹಾಗೂ  ಜೆಎಂಎಫ್‌ಸಿ ಮುಧೋಳ.

ಸಾಕ್ಷಿಯ ಸಹಿ